

ಆ ಹೊಂಡದ ಸುತ್ತ ಬಂದು ನಿಂತವು. ಎತ್ತರದ ಬಂಡೆಯ ಮೇಲೆ ಕುಳಿತ ಹಿರಿಯ ಕಪ್ಪೆ 'ಮಿತ್ರರೇ... ನಾವೆಲ್ಲ ಸೇರಿ ಈ ಪುಟ್ಟ ಆನೆಯ ಮರಿಯನ್ನು ರಕ್ಷಿಸಬೇಕಾಗಿದೆ. ಆದರೆ, ಅದರ ಬಲದ ಎದುರು ನಮ್ಮ ಬಲ ಶೂನ್ಯ... ಹೇಗೆ ಮಾಡುವುದು?' ಎಂದು ಚರ್ಚಿಸತೊಡಗಿತು.

ಈ ನಡುವೆ, ಹೊಂಡದ ಪಕ್ಕದಲ್ಲಿದ್ದ ಮರದ ಮೇಲೆ ಕುಳಿತು ತನ್ನ ಮರಿಗೆ ಹಾಲು ಕಾಣಿಸುತ್ತಿದ್ದ ಮಂಗ, ಕಪ್ಪೆಯ ಮಾತು ಕೇಳಿಸಿಕೊಂಡಿದ್ದೇ ತಡ, ಮರಿಯನ್ನು ಎದೆಗವಚಿಕೊಂಡು, ಮರದಿಂದ ಮರಕ್ಕೆ ಹಾರುತ್ತ ಕರಡಿ ಮನೆಗೆ ಬಂದು ತಲುಪಿತು. ಕರಡಿಗೆ ಎಲ್ಲ ವಿಷಯ ವಿವರಿಸಿದಾಗ ಅದೂ ಕೂಡ ಮಮ್ಮಲ ಮರುಗಿ, ಅಕ್ಕಪಕ್ಕ ವಾಸವಿದ್ದ ತನ್ನ ಬಂಧುಗಳನ್ನು ಕೂಗಿ ಕರೆದು, ಅವುಗಳೊಂದಿಗೆ ಹೊಂಡದತ್ತ ಹೊರಟಿತು. ಹಾಗೆಯೇ ಹೊರಡುವ ದಾರಿಯಲ್ಲಿ ಪ್ರತಿಯೊಂದು ಕರಡಿಯೂ ತಮ್ಮ ಶಕ್ತ್ಯಾನುಸಾರ ಮರ–ಗಿಡಗಳನ್ನು ಕಿತ್ತಿ ತಂದವು.ಹೊಂಡದ ಬಳಿ ಬಂದು ನಂತರ ತಮ್ಮ ಕೈಯಲ್ಲಿದ್ದ ಮರ–ಗಿಡಗಳನ್ನು ಒಂದರ ಮೇಲೊಂದರಂತೆ ಹೊಂಡದೊಳಗೆ ಹಾಕಿದವು. ಇದನ್ನು ಕಂಡ ಮೊಸಳೆಗಳೂ ಕೂಡ ತಮ್ಮ ಬಲಿಷ್ಠ ಬಾಲ ಬಳಸಿ, ಸುತ್ತಲಿದ್ದ ಮಣ್ಣು ಕಲ್ಲುಗಳನ್ನು ಅದರೊಳಗೆ ತಳ್ಳಿದವು. ಆಗ ಹೊಂಡದಲ್ಲಿ ಒಂದುಬಗೆಯ ಮೆಟ್ಟಿಲು ಮಾರ್ಪಾಟಾದಂತಾಯಿತು. ಹೊಂಡದೊಳಗಿಂದ ಆಚೆ ಬರಲು ಆನೆ ಮರಿ ಯತ್ನಿಸುತ್ತಿದ್ದಾಗ, ಹೊಂಡದ ಸುತ್ತಲೂ ನಿಂತಿದ್ದ ಕಪ್ಪೆ, ಮೊಸಳೆ ಇತರೆ ಪ್ರಾಣಿ ಪಕ್ಷಿಗಳು ಕೇಕೆ ಹಾಕುತ್ತಾ ಅದಕ್ಕೆ ಹುರಿದುಂಬಿಸಿದವು. ಅಂತೂ ಇಂತು ಆನೆ ಮರಿ ಈಚೆಗೆ ಬಂದ ನಂತರ ಎಲ್ಲವೂ ಅದನ್ನು ಸುತ್ತುವರೆದು ಖುಷಿಯಿಂದ ಕುಣಿಯತೊಡಗಿದವು. ಅಷ್ಟರಲ್ಲಿ ಮರದ ಮೇಲಿದ್ದ ಇನ್ನೊಂದು ಮಂಗ, ದೂರದಿಂದ ಆನೆಯೊಂದು ಅದರ ಮರಿ ಅರಸುತ್ತ ಬರುವುದನ್ನು ಕಂಡು, ಅತ್ತ ಧಾವಿಸಿ ಆ ಆನೆಯನ್ನು ಮರಿಯ ಬಳಿ ಕರೆದು ತಂದಿತು. ಕಳೆದುಹೋದ ಮರಿ ಕಂಡು, ಆನೆ ಖುಷಿಯಿಂದ ತನ್ನ ಸೊಂಡಿಲು ಎತ್ತಿ ಅಲ್ಲಿ ನೆರೆದಿದ್ದ ಪ್ರಾಣಿಗಳಿಗೆ ಗೌರವ ಸೂಚಿಸಿ ಮರಿಯೊಂದಿಗೆ ಕಾಡಿನತ್ತ ಹೆಜ್ಜೆ ಹಾಕಿತು. ■

**ಎಳೆಯರ ಅಂಗಳಕ್ಕೆ ನೀವೂ ಕಥೆ ಕವನಗಳನ್ನು ಬರೆಯಿರಿ. ಯೂನಿಕೋಡ್, ನುಡಿ, ಬರಹ ತಂತ್ರಾಂಶಗಳಲ್ಲಿ ಬರೆದು ಕಳಿಸಬಹುದು.**

**editorsu@sudha.co.in**

# ಪ್ರೀತಿಯ ಅಡುಗೆ

■ **ತಮ್ಮಣ್ಣ ಬೀಗಾರ**

ಮೋಡದ ಬಿತ್ತನೆ ಮಳೆಹನಿ ಬೀಜ
ನೀರೊಳು ಬೆರೆತಿದೆ ಸತ್ವದ ತೇಜ
ಗಾಳಿಯು ನಮ್ಮ ಬೀಜದ ಬುಟ್ಟಿ
ತಾನೇ ಬಿತ್ತುವ ಕಾಣದ ಸೃಷ್ಟಿ
ಹಕ್ಕಿಯು ಕೂಡಾ ಬಿತ್ತುವ ರೈತ
ಹೊಲವನು ಬೇಡದ ಖುಷಿ ಖುಷಿ ಗೆಯ್ತ
ಜೇನುಗಳೆಲ್ಲಾ ರೈತನ ಹಾಡು
ದಿನವೂ ಹೊಲದಲಿ ದುಡಿವವು ನೋಡು

ಕಪ್ಪೆಯ ಟ್ರೊಂಯ್ ಟ್ರೊಂಯ್ ತಾಳದ ಕುಣಿತ
ಬೆಳೆಯನು ಕಾಡುವ ಕೀಟಕೆ ಹಣಿತ
ಗುಡುಗು ಸಿಡಿಲು ಮಿಂಚೋ ಮಿಂಚು
ಭೂಮಿಗೆ ಒಳಿತನು ಮಾಡುವ ಸಂಚು
ಗಿಡಮರ ತೂಗಿ ಭೂಮಿಯು ತೇಗಿ
ಎಲ್ಲಾ ಒಳಿತನು ಮಾಡುವ ಯೋಗಿ
ಯಾರದೊ ಯಾರದೊ ತಿಳಿಯದ ಕೊಡುಗೆ
ಪಕೃತಿಯೆ ನೀಡುವ ಪ್ರೀತಿಯ ಅಡುಗೆ

## ಕೆಲವು ಚಿತ್ರಗಳು

ಗಿಡದ ಅಡಿಗೆ ಮನೆ ಒಳಗೆ
ಹಸಿರಿನ ಬಣ್ಣ ತುಂಬಿತ್ತು
ಚಿಟ್ಟೆಯ ಊಟದ ತಟ್ಟೆಯ ತುಂಬಾ
ಬಣ್ಣದ ರಂಗೋಲಿ ಹಾಕಿತ್ತು
ಕಾಲಿಲ್ಲದೆಯೇ ನಡೆಯುವ ಪ್ರಾಣಿ
ಇಡಿ ಇಡಿಯಾಗಿಯೆ ನುಂಗಿತ್ತು
ಜುಟ್ಟಿನ ಹಕ್ಕಿಗೆ ಸಾವಿರ ಕಣ್ಣು
ನೋಡಲು ಮಾತ್ರ ಎರಡಿತ್ತು
ಬಯಲಲಿ ತುಂಬಿದ ಪಿಳಿ ಪಿಳಿ ದೀಪ
ಆರಿಸಿ ಒಬ್ಬನೆ ಬೆಳಗಿತ್ತು
ಪುಟ್ಟನೆ ಪಾದದ ಪುಟು ಪುಟು ಸದ್ದು
ಅಮ್ಮನ ಮಡಿಲನು ಏರಿತ್ತು

## ಹರಡಲಿ ಖುಷಿ

ಹಕ್ಕಿ ಹಾರೋದು ಇಷ್ಟ ಅಂದ್ರೆ
ಬಯಲಿನ ಕಡೆಗೆ ಹೋಗಬೇಕು
ಹಕ್ಕಿಯ ರೆಕ್ಕೆ ಬಾನಿನ ಚಿತ್ರ
ಆಗೋದ ನೀವು ನೋಡಬೇಕು

ಹಕ್ಕಿ ಹಾಡು ಕೇಳೋದಾದ್ರೆ
ಮರದ ಕಡೆಗೆ ಹೋಗಬೇಕು
ಹಕ್ಕಿಯ ಹಾಡು ಮರದ ಹಾಡು
ಒಂದೇ ಆಗಿ ಕೇಳಬೇಕು

ಹಕ್ಕಿಯ ಗೂಡು ಎಲ್ಲೇ ಇದ್ರು
ಮಲಗಿರ್‍ತಾವೆ ಹಕ್ಕಿಮರಿ



ಹಕ್ಕಿಯ ಮಕ್ಕಳು ನಮ್ಮಯ ಮಕ್ಕಳು
ಸೇರಿರ್‍ತಾರೆ ಸುಮ್ಮನಿರಿ

ಹಕ್ಕಿಯ ಮರಿಗಳ ಪ್ರೀತಿಯನೆಲ್ಲ
ತುಂಬಿವೆ ಮರಗಳು ಹಣ್ಣಲ್ಲಿ
ಹಣ್ಣನು ತಿನ್ನುವ ಮಕ್ಕಳ ಪ್ರೀತಿ
ಹರಡಲಿ ಎಲ್ಲೆಡೆ ಖುಷಿಯಲ್ಲಿ
■